ಸೋಫಿ ಹುಟ್ಟಿದಳು, ನನ್ನ ಸೂಪರ್ ಮಾರ್ಕೆಟ್ಟಿನ ಕೆಲಸಕ್ಕೆ ಬೈ ಹೇಳಬೇಕಾಯಿತು. ಅವಳಿಗೆ ಈಗ ಆರು ತಿಂಗಳು. ಅಲ್ಲಿ, ಇಲ್ಲಿ ಕೆಲಸ ಮಾಡಿ ಸ್ವಲ್ಪ ದುಡ್ಡು ಸಂಪಾದಿಸಿದೆ. ಸರ್ಕಾರದ ಮೊರೆಹೊಕ್ಕೆ. ಅದು ನನ್ನ ಮನೆಯ ಬಾಡಿಗೆ ನೀಡಲಾರಂಭಿಸಿತು. ಅಲ್ಲದೆ ನಾವು ಮೂವರಿಗೆ ಮಾಸಾಶನವನ್ನೂ ಮಂಜೂರು ಮಾಡಿತು. ಸ್ಯಾಮ್ ಈಗ ಅರ್ಧ ದಿನ ಕಿಂಡರ್ ಗಾರ್ಟನ್ನಿಗೆ ಹೋಗುತ್ತಾನೆ."

ಮಧ್ಯಾಹ್ನವಾಯಿತು. ಲೀಸಾ ಮಗನನ್ನು ಕಿಂಡರ್ ಗಾರ್ಟನ್ನಿನಿಂದ ಕರೆದೊಯ್ಯಬೇಕು. ಎದ್ದು ನಿಂತಳು. ಹೊರಗೆ ಮಳೆ.

"ಮಳೆಯಲ್ಲಿ ಹೋಗುವುದು ಬೇಡ. ನಾನು ಡ್ರಾಪ್ ಕೊಡ್ತೀನಿ."

"ಖಂಡಿತ ಬೇಡ. ಬಸ್ ಹಿಡೀತೀನಿ."

"ನೀನು ನನಗೋಸ್ಕರ, ನನಗೆ ನಿನ್ನ ವಿಷಯ ತಿಳಿಸುವುದಕ್ಕೋಸ್ಕರ ಕಾಲವ್ಯಯ ಮಾಡಿದ್ದೀಯ. ನೆನೆದುಕೊಂಡು ಹೋಗಬೇಡ."

ಲೀಸಾ ಮತ್ತೆ ಬೇಡ ಎನ್ನಲಿಲ್ಲ. ಡೇವಿಡನೊಡನೆ ಕಾರಿನಲ್ಲಿ ಹೊರಟಳು. ತಾಯಿ, ಮಗ ಇಬ್ಬರೂ ಅವನ ಕಾರಿನಲ್ಲಿಯೇ ತಮ್ಮ ಮನೆಯನ್ನೂ ತಲಪಿದರು.

ಕೆಂಪು ಇಟ್ಟಿಗೆಯ ಹಳೆಯ ಕಟ್ಟಡ. ಅಲ್ಲಿ ಹತ್ತಾರು ಅಪಾರ್ಟ್‌ಮೆಂಟುಗಳು. ಇವಳದ್ದು ನಂಬರ್ ಆರು. ಕಾರಿಳಿದು, ಡೇವಿಡ್‌ಗೆ "ಥಾಂಕ್ಸ್" ಹೇಳಿ ಒಳನಡೆದಳು. ಅಲ್ಲಿದ್ದವರು ಪ್ರಾಯಶಃ ಲೀಸಾ ತರಹದ ವ್ಯಕ್ತಿಗಳೇ. ಪ್ರತಿ ಮನೆಯ ಬ್ಯಾಲ್ಕನಿಯಲ್ಲೂ ಹಳೆಯ ಕುರ್ಚಿ, ಮೇಜುಗಳು, ಸೈಕಲ್ ಚಕ್ರಗಳು, ಮತ್ತು ಬೇಡದ ವಸ್ತುಗಳು.

ಅವಳ ಕಥೆಯನ್ನೇ ಬರೆಯಲು ಸಿದ್ಧನಾದ. ದಿಟ್ಟ ಹೆಂಗಸು ಎನ್ನಿಸಿತು. ಮೊದಮೊದಲು ಲೀಸಾ ತರಹದ ವ್ಯಕ್ತಿಗಳು ಎಷ್ಟೋ ಇದ್ದಾರೆ ಸಿಡ್ನಿಯಲ್ಲಿ, ಅವಳೇನು ಮಹಾ ಎನ್ನಿಸಿತು ಒಮ್ಮೆ. ಆದರೆ ಕೆಲವೇ ದಿನಗಳಲ್ಲಿ ಅವಳು ಸರ್ಕಾರೀ ಪೆನ್ಷನ್ ಪಡೆದು ಬೀದಿ ತಿರುಗಿಕೊಂಡಿರುವ ಹೆಂಗಸಲ್ಲ ಎಂಬುದು ಗೋಚರವಾಯಿತು.

ಮತ್ತೊಂದು ದಿನ ಹೀಗೇ ಬಂದಿದ್ದೆ ಎಂದು ಕೆಫೆಗೆ ಬಂದಳು. ಕಾಫಿ ತರಿಸಿದ. ಮುಂದೆ ಕುಳಿತು ಮಾತು ಪ್ರಾರಂಭಿಸಿದಳು.

"ಮೊನ್ನೆ ಟೀವಿಯಲ್ಲಿ ನೋಡುತ್ತಿದ್ದೆ. ಅದರಲ್ಲಿ ಈ ವರ್ಷದ ನೊಬೆಲ್ ಬಹುಮಾನವನ್ನು ಲೇಸರ್ ಟ್ವೀಸರ್ ಕಂಡುಹಿಡಿದವರಿಗೆ ಕೊಡಲಾಗಿದೆ ಎಂದು ಹೇಳಲಾಯಿತು. ಹಾಗೆಂದರೆ ಏನು ಗೊತ್ತೆ? ಲೇಸರ್ ಮತ್ತು ಟ್ವೀಸರ್ ಏನು ಸಂಬಂಧ?"

"ನನಗೆ ಅದರ ಅರಿವೇ ಇಲ್ಲವಲ್ಲ."

"ಬಿಡಿ ಹಾಗಾದರೆ. ನಮ್ಮ ವಠಾರದ 10ನೇ ನಂಬರ್ ಮನೆಯಲ್ಲಿ ರಿಟೈರಾಗಿರುವ ಮೇಷ್ಟರಿದ್ದಾರೆ. ಅವರನ್ನು ಕೇಳಿದೆ. ಅವರೂ ನನಗೂ ಇವೆಲ್ಲಾ ಹೊಸತು, ನೋಡಿ ಹೇಳುತ್ತೇನೆ ಎಂದರು."

"ಪರವಾಗಿಲ್ಲ. ನಿನ್ನ ಕುತೂಹಲವನ್ನು ಮೆಚ್ಚಬೇಕು."

"ಕುತೂಹಲ ಇಲ್ಲದ ಜೀವನದಲ್ಲಿ ಏನಿದೆ, ಬಿಡಿ. ಆ ಮೇಷ್ಟರ ಮನೆಗೆ ಹೋಗಿ ನಾನು ಕಂಪ್ಯೂಟರ್ ಕಲಿಯುತ್ತಿದ್ದೇನೆ, ಸಮಯವಾದಾಗ ಅನ್ನಿ. ನಿಮಗೆ ಬೋರ್ ಹೊಡೆಸುವುದಿಲ್ಲ. ಬರುತ್ತೇನೆ."

"ಬೇಡ ಕೂರು, ಮತ್ತಷ್ಟು ನಿನ್ನ ಬಗ್ಗೆ ಹೇಳು."